# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 23

ಸ್ವಾಮಿ ನಿತ್ಯಸ್ಥಾನಂದ

### ಆತ್ಮ ಬುದ್ಧಿ

ನಾವು ಆತ್ಮಬುದ್ಧಿಯನ್ನು ಬೆಳೆಸಿಕೊಳ್ಳಬೇಕು ಎಂಬ ವಿಷಯವಾಗಿ ಮಾತನಾಡುತ್ತ ಸ್ವಾಮಿ ಯತೀಶ್ವರಾನಂದಜಿಯವರು ಕೆಳಗಿನ ಹಾಸ್ಯ ಪ್ರಸಂಗವನ್ನು ಹೇಳುತ್ತಿದ್ದರು:

‘‘ಸಂಜೆಯ ಕತ್ತಲು ವೇಳೆಯಲ್ಲಿ ಕುಡಿದು ಮತ್ತನಾಗಿದ್ದ ವ್ಯಕ್ತಿಯೊಬ್ಬನು ಕಾರಿನಲ್ಲಿ ಕುಳಿತು ಅದನ್ನು ಓಡಿಸಲು ಪ್ರಯತ್ನಿಸಿದ. ಕಾರಿನ ಗೇರು, ಕನ್ನಡಿ, ಸ್ಟೀರಿಂಗ್‌ಚಕ್ರ ಇತ್ಯಾದಿಗಳಾವುವೂ ಅವನಿಗೆ ಕಾಣಿಸಲಿಲ್ಲ. ಅವು ಎಲ್ಲಿ ಹೋದವು ಎಂದು ತಿಳಿಯದೆ ಕೂಡಲೇ ಹೋಗಿ ಪೋಲೀಸಿಗೆ ದೂರಿತ್ತ. ಪೋಲೀಸಿನವರು ಸ್ವಲ್ಪ ಹೊತ್ತಿನಲ್ಲಿ ಬಂದು ಪರಿಶೀಲಿಸುವುದಾಗಿ ಹೇಳಿ ಕಳುಹಿಸಿದರು. ಆ ವ್ಯಕ್ತಿಯು ಸ್ವಲ್ಪ ಸಮಯದ ನಂತರ ಮತ್ತೆ ಕಾರಿನಲ್ಲಿ ಹೋಗಿ ಕುಳಿತನು. ಆಗ ಅವನು ಎಲ್ಲ ಭಾಗಗಳೂ ಸರಿಯಾಗಿಯೇ ಇರುವುದನ್ನು ಗಮನಿಸಿದನು. ಇದು ಹೇಗೆ ಹೀಗಾಯಿತು? ಹಿಂದಿನ ಬಾರಿ ಅವನು ಕುಳಿತಾಗ ಮದ್ಯದ ಅಮಲು ಇನ್ನೂ ತೀವ್ರವಾಗಿಯೇ ಇತ್ತು. ಆಗ ಅವನು ಕಾರಿನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದನು. ಎರಡನೆಯ ಬಾರಿ ಬಂದಾಗ ಸ್ವಲ್ಪ ಅಮಲು ಇಳಿದಿತ್ತು. ಈಗ ಮುಂದಿನ ಸೀಟಿನಲ್ಲಿ ಕುಳಿತಿದ್ದರಿಂದ ಎಲ್ಲ ಭಾಗಗಳು ಸರಿಯಾಗಿ ಕಾಣಿಸಿದವು.’’ ಕತೆಯನ್ನು ಮುಗಿಸಿ ಅವರು ಹೇಳುತ್ತಿದ್ದರು: ‘‘ಅಜ್ಞಾನದ ಸುರೆಯನ್ನು ಕುಡಿದ ನಾವೂ ಕೂಡ, ದೇಹ ಮತ್ತು ಮನಸ್ಸುಗಳೆಂಬ ಹಿಂಬದಿಯ ಸೀಟಿನಲ್ಲಿ ಕುಳಿತು, ಈ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡಂತೆ ಭಾವಿಸುತ್ತೇವೆ. ಈ ಅಜ್ಞಾನದ ಅಮಲು ಇಳಿದ ಮೇಲೆ ನಾವೂ ಆತ್ಮನ ಮುಂದಿನ ಸೀಟಿನಲ್ಲಿ ಕುಳಿತಾಗ ಎಲ್ಲವೂ ಸರಿಯಾಗಿರುವುದು ಕಂಡುಬರುತ್ತದೆ.’’ *(‘Swami Yatishwarananda As We Know Him’, ಪುಟ ೫೭೩)*

### ಅಭಿಮಾನ ತ್ಯಾಗ

ಶ್ರೀರಾಮಕೃಷ್ಣರು ಮಾತನ್ನು ಮುಂದುವರಿಸುತ್ತಾರೆ: ‘‘ಒಮ್ಮೆ ಕೃಷ್ಣಕಿಶೋರ ನನ್ನನ್ನು ಕೇಳಿದ: ‘ಯಜ್ಞೋಪವೀತವನ್ನು ಏಕೆ ಬಿಸಾಡಿಬಿಟ್ಟಿದ್ದೀರಿ?’ ನನಗೆ ಹಿಂದೆ ಭಗವದವಸ್ಥೆ ಉಂಟಾದಾಗ ಆಶ್ವೀಜದ ಬಿರುಗಾಳಿ ಮಳೆ ಹಾಗೆ ಏನೋ ಒಂದು ಬಂದು ನನ್ನ ಹತ್ತಿರ ಏನೇನು ಇತ್ತೋ ಎಲ್ಲವನ್ನೂ ಹೊಡೆದುಕೊಂಡು ಹೋಗಿ



ಬಿಟ್ಟಿತು. ನನ್ನ ಹಿಂದಿನ ಸ್ವರೂಪವೇ ಬದಲಾವಣೆ ಹೊಂದಿಬಿಟ್ಟಿತು. ಬಾಹ್ಯ ಪ್ರಜ್ಞೆ ಇರುತ್ತಿರಲಿಲ್ಲ. ಉಟ್ಟಿದ್ದ ಬಟ್ಟೆಯೇ ಮೈಮೇಲೆ ಇಲ್ಲದೆ ಹೋಗುವಾಗ ಇನ್ನು ಯಜ್ಞೋಪವೀತದ ಪಾಡು ಕೇಳಬೇಕೆ?’’

ಯಜ್ಞೋಪವೀತವನ್ನು ಬಿಸಾಡುವುದೆಂದರೆ ತಾನು ಬ್ರಾಹ್ಮಣನೆಂಬ ಅಭಿಮಾನವನ್ನು ತ್ಯಜಿಸುವುದು. ನಮ್ಮ ವ್ಯಕ್ತಿತ್ವಕ್ಕೆ ನಾವು ಜಾತ್ಯಭಿಮಾನದ ಗಡಿ, ಕುಲಾಭಿಮಾನದ ಗಡಿ, ಪಾಂಡಿತ್ಯಾಭಿಮಾನದ ಗಡಿ — ಹೀಗೆ ಅನೇಕ ಬಗೆಯ ಗಡಿಗಳನ್ನು ಹಾಕಿಕೊಳ್ಳುತ್ತೇವೆ. ಈ ಗಡಿಯಿಂದ ಹೊರಗಡೆ ಇರುವವರು ನಮ್ಮ ಪ್ರೀತಿ ಸಹಾನುಭೂತಿಯ ಪರಿಧಿಯ ಒಳಗೆ ಬರದೇ ಇರಬಹುದು. ಶ್ರೀರಾಮಕೃಷ್ಣರು ಎಲ್ಲ ಗಡಿಯನ್ನೂ ಮೀರಿ ನಿಂತವರು. ಯಾವುದೇ ವರ್ಗಕ್ಕೂ ಅವರನ್ನು ಸೇರಿಸಲಾಗುವುದಿಲ್ಲ.

ನಮ್ಮ ಗಡಿ ಕಡಿದಾದಷ್ಟೂ ಬಿಗಿತ (tention) ಅಧಿಕ. ಕೆಲವರು ಸಾಧನೆಯ ಹೆಸರಿನಲ್ಲಿಯೇ ತುಂಬ ಸಂಕುಚಿತರಾಗುತ್ತಾರೆ.

ಸ್ವಾಮಿ ಯತೀಶ್ವರಾನಂದರು ಹೇಳುವಂತೆ ಸಾಧನೆಯ ಜೀವನದಲ್ಲಿ ಎರಡು ಮುಖ್ಯ ಅಡಚಣೆಗಳಿವೆ: ಮತಾಂಧತೆ ಮತ್ತು ಅಹಂಕೇಂದ್ರತೆ. ಅವರು ಹೇಳುತ್ತಾರೆ: ''ಯಾವುದೋ ನಿರ್ದಿಷ್ಟ ದೇವತೆಯನ್ನು ಆರಾಧಿಸುತ್ತ ಒಂದು ನಿರ್ದಿಷ್ಟ ಮಾರ್ಗ ವನ್ನು ಅನುಸರಿಸುವ ಸಾಧಕನು ಮತಾಂಧನಾಗುವ ಸಂಭವ ವಿರುತ್ತದೆ. ಅವನು ತನ್ನ ದೇವತೆಯ ಅಥವಾ ಸಾಧನೆಯ ಸಂಬಂಧವಾಗಿ ಒಂದು ಸಂಕುಚಿತ ದೃಷ್ಟಿಯನ್ನು ಬೆಳೆಸಿಕೊಳ್ಳ ಬಹುದು. ಆದ್ದರಿಂದ ಜಗತ್ತಿನ ಎಲ್ಲ ದೇಶದ ಆಧ್ಯಾತ್ಮಿಕ ಮಹಾ ಬೋಧಕರಿಗೂ ಸಂತ ಶ್ರೇಷ್ಠರಿಗೂ ಪ್ರಣಾಮವನ್ನು ಸಲ್ಲಿಸು ವುದು ಬಹಳ ಒಳ್ಳೆಯದು. ಹೀಗೆ ಮನಸ್ಸು ವಿಶಾಲವಾಗುತ್ತದೆ. ಎಲ್ಲ ದೇವದೇವತೆಯರನ್ನೂ ಸ್ವೀಕರಿಸಿ ಅವರೆಲ್ಲರೂ ಒಂದೇ ಆತ್ಯಂತಿಕ ಸತ್ಯದ ವಿವಿಧ ಅಭಿವ್ಯಕ್ತಿಗಳು ಎಂದು ಭಾವಿಸಿ. 'ಓ, ಶ್ರೀರಾಮಕೃಷ್ಣ ಆಶ್ರಮದಲ್ಲಿ ಎಲ್ಲ ಹಾಡುಗಳನ್ನೂ ಹಾಡು ತ್ತಾರೆ' ಎಂದು ಜನ ನಿಂದಿಸುವುದನ್ನು ಕೇಳಿದ್ದೇನೆ. ವೈಷ್ಣವರು ಶಿವಕೀರ್ತನೆಯನ್ನು ಇಷ್ಟಪಡುವುದಿಲ್ಲ. ಈಗ ಎಲ್ಲ ದೇವತೆಗಳೂ ಒಂದೇ ಆತ್ಯಂತಿಕ ಸತ್ಯವೆಂದು ಸ್ವೀಕರಿಸುವುದು ಆವಶ್ಯಕ.''

### ಧಾರ್ಮಿಕ ಸ್ವಾರ್ಥತೆ

ಅಹಂ ಕೇಂದ್ರತೆಯ ಬಗ್ಗೆ ಅವರು ಹೇಳುತ್ತಾರೆ: ''ಇದನ್ನು ಧಾರ್ಮಿಕ ಸ್ವಾರ್ಥತೆ ಎಂದು ಕರೆಯಬಹುದು. ಇತರರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ – ಎಂಬ ಭಾವ. ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ, ಪ್ರಾರಂಭಾವಸ್ಥೆಯಲ್ಲಿ ಧಾರ್ಮಿಕ ವ್ಯಕ್ತಿಗಳು ಸಾಮಾನ್ಯ ಜನರಿಗಿಂತ ಹೆಚ್ಚು ಸ್ವಾರ್ಥಿ ಗಳಾಗುತ್ತಾರೆ; ಅವರು ಹೆಚ್ಚು ದೇಹಕೇಂದ್ರಿತರೂ ಅಹಂ ಕೇಂದ್ರಿ ತರೂ ಆಗುತ್ತಾರೆ. ಈ ಅಹಂ ಸ್ವಲ್ಪವಾದರೂ ನಾಶವಾಗದಿದ್ದರೆ ವ್ಯಕ್ತಿಯ ಪ್ರಜ್ಞೆಯು ವಿಶಾಲವಾಗುವುದಿಲ್ಲ. ನಿಮ್ಮ ಇಷ್ಟ ಅನಿಷ್ಟ ಗಳನ್ನು ಕತ್ತರಿಸಿ. ಆದ್ದರಿಂದ ಎಲ್ಲರ ಒಳಿತಿಗಾಗಿ ಪ್ರಾರ್ಥಿಸುವುದು ಒಳ್ಳೆಯದು. ಇದು ಮನಸ್ಸನ್ನು ವಿಶಾಲಗೊಳಿಸುತ್ತದೆ.''

ಈ ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಯತೀಶ್ವರಾ ನಂದರು ಒಂದು ಕಥೆಯನ್ನು ಹೇಳುತ್ತಾರೆ: ''ಇಬ್ಬರು ಆಧ್ಯಾತ್ಮಿಕ ಸಾಧಕರು ಒಟ್ಟಿಗೆ ವಾಸಿಸುತ್ತಿದ್ದರು. ಅವರಲ್ಲಿ ಒಬ್ಬನು ಕ್ರಿಯಾ ಶೀಲನು. ಅವನು ತನ್ನ ಸ್ನೇಹಿತನಿಗೆ ಊಟಕ್ಕೆ ಆಸನ ತಟ್ಟೆ ಮುಂತಾ ದವುಗಳನ್ನು ಅಣಿ ಮಾಡಲು ಹೇಳುತ್ತಿದ್ದ. ಆದರೆ ಸ್ನೇಹಿತನು 'ನಾನು ಜಪ ಮಾಡಬೇಕಾಗಿದೆ' ಎಂದು ಹೇಳಿ ತಪ್ಪಿಸಿಕೊಳ್ಳು ತ್ತಿದ್ದ. ಇನ್ನೊಬ್ಬನು ಊಟಕ್ಕೆ ಅಣಿಮಾಡಿದ ಕೂಡಲೇ ಸ್ನೇಹಿತನು ಜಪ ನಿಲ್ಲಿಸಿ ಊಟಕ್ಕೆ ರೆಡಿಯಾಗಿ ಬರುತ್ತಿದ್ದ!''

### ಆಗಿನ ಕಾಲದ ಯುವಕರು

ನರೇಂದ್ರ ಮತ್ತು ಮಾಸ್ಟರ್ ಮಹಾಶಯರ ನಡುವೆ ಆಗಿನ ಕಾಲದ ಯುವಕರ ರೀತಿನೀತಿ ನಡವಳಿಕೆಗಳ ಕುರಿತಾಗಿ ಮಾತು ಕತೆ ನಡೆಯುತ್ತಿದೆ. ಯುವಕರು ಕುಡಿಯುತ್ತಾರೆ, ಪ್ರಶ್ನಾರ್ಥಕ ಸ್ಥಳಗಳಿಗೆ ಹೋಗುತ್ತಾರೆ, ಗುರುಹಿರಿಯರನ್ನು ಗೌರವಿಸುವುದಿಲ್ಲ ಇತ್ಯಾದಿ ವಿಷಯದ ಸಂಬಂಧವಾಗಿ ವಿಚಾರ ವಿನಿಮಯ ನಡೆಯುತ್ತಿತ್ತು. ಅವರು ಈಗಿನ ಕಾಲದ ಯುವಕರ ಬಗ್ಗೆಯೇ ಮಾತನಾಡುತ್ತಿರುವರೇನೋ ಎಂದೆನಿಸುತ್ತದೆ. ಅಂದರೆ ಎಲ್ಲ ಕಾಲ ದಲ್ಲಿಯೂ ಪರಿಸ್ಥಿತಿ ಹೀಗೆಯೇ ಇತ್ತು ಎಂದು ಹೇಳಬಹುದು. ಮನುಷ್ಯನ ಸ್ವಭಾವವೇನೆಂದರೆ ಹಿಂದೆ ಎಲ್ಲ ಚೆನ್ನಾಗಿತ್ತು, ಈಗ ಎಲ್ಲ ಕೆಟ್ಟುಹೋಯಿತು ಎಂದು ಭಾವಿಸುವುದು. ಅವರಿಬ್ಬರ ನಡುವೆ ಈ ರೀತಿ ಮಾತುಕತೆ ನಡೆಯುತ್ತಿರುವಾಗ ಪರಮ ಹಂಸರು ಅವರ ಹತ್ತಿರಕ್ಕೆ ಬಂದು, ''ಏನು ಸಮಾಚಾರ? ಯಾವ ರಾಜ್ಯವನ್ನು ಕಟ್ಟುವವರಿದ್ದೀರಿ?'' ಎಂದರು. ನರೇಂದ್ರನು ತಾವು ಚರ್ಚಿಸುತ್ತಿದ್ದ ವಿಷಯವನ್ನು ಪರಮಹಂಸರಿಗೆ ತಿಳಿಸಿದಾಗ ಪರಮಹಂಸರು ಗಂಭೀರ ಮುಖಮುದ್ರೆಯಲ್ಲಿ ಮಾಸ್ಟರರನ್ನು ಕುರಿತು, ಹೇಳಿದರು: ''ಈ ವಿಧವಾದ ಮಾತುಕತೆ ಒಳ್ಳೆಯದಲ್ಲ. ಭಗವಂತನ ಸಂಬಂಧವಾಗಿ ಆಡುವ ಮಾತುಕತೆ ಬಿಟ್ಟರೆ ಉಳಿ ದುದು ಯಾವುದೂ ಶ್ರೇಯಸ್ಕರವಲ್ಲ. ನೀನು ಇವರೆಲ್ಲರಿಗಿಂತ ವಯಸ್ಸಿನಲ್ಲಿ ದೊಡ್ಡವನು, ಬುದ್ಧಿ ಬಂದಿದೆ. ಈ ವಿಧವಾದ ಮಾತುಕತೆ ಎತ್ತಲೂ ನೀನು ಅವಕಾಶ ಕೊಡಬಾರದಾಗಿತ್ತು.''

ಸಮಾಜದ ಕೆಡುಕಿನ ಬಗ್ಗೆ ಚಿಂತಿಸುವುದೂ, ಅದರ ಬಗ್ಗೆ ಚರ್ಚಿಸುವುದೂ ತಪ್ಪು – ಇದರಿಂದ ನಮ್ಮ ಮನಸ್ಸು ಕಲುಷಿತ ವಾಗುತ್ತದೆ. ಸಮಾಜವನ್ನು ದೂಷಿಸುವುದರಿಂದ ಸಮಾಜ ವೇನೂ ಉತ್ತಮವಾಗುವುದಿಲ್ಲ; ನಮ್ಮ ಮನಸ್ಸು ಮಲಿನವಾಗು ತ್ತದೆ ಅಷ್ಟೆ. ಇತರರು ಮತ್ತು ಸಮಾಜದ ದೋಷಗಳನ್ನು ಕುರಿತು ಮಾತನಾಡುವುದರಲ್ಲಿ ಜನರು ಒಂದು ರೀತಿಯ ಆನಂದವನ್ನು ಪಡೆಯುತ್ತಾರೆ. ಅದರಲ್ಲಿ ಒಂದು ರುಚಿಯನ್ನು ಕಾಣುತ್ತಾರೆ (They relish it). ಚೀನಾದ ಶ್ರೇಷ್ಠ ಚಿಂತಕನಾದ ಕನ್‌ಫ್ಯೂಶಿ ಯಸ್‌ನು ಹೇಳುತ್ತಾನೆ: ''It is better to light a small lamp than to curse the darkness'' (ಕತ್ತಲೆಯನ್ನು ಶಪಿಸುವುದಕ್ಕಿಂದ ಒಂದು ಸಣ್ಣ ಹಣತೆಯನ್ನು ಹಚ್ಚುವುದು ಒಳ್ಳೆಯದು). ಶ್ರೀರಾಮಕೃಷ್ಣರು ಹೇಳುವಂತೆ ಭಗವತ್ಸಂಬಂಧ ವಾಗಿ ಮಾತನಾಡುವುದರಿಂದ ನಮ್ಮ ಮನಸ್ಸು ಶುದ್ಧವಾಗುವುದು ಮಾತ್ರವಲ್ಲದೆ ಸುತ್ತಲೂ ದಿವ್ಯ ಸ್ಪಂದನವನ್ನು ಸೃಷ್ಟಿಸಿದಂತಾಗು ತ್ತದೆ. ಇದರಿಂದ ಸಮಾಜಕ್ಕೆ ಸ್ವಲ್ಪವಾದರೂ ಒಳ್ಳೆಯದಾಗುತ್ತದೆ. ಸಮಾಜದ ಕತ್ತಲೆಯನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸಿದಂತಾಗು ತ್ತದೆ.

*(ಮುಂದುವರಿಯುವುದು)*